**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 437/2023 |
| ಸಿ.ಡಬ್ಲೂ | 5 |
| ಪಿ.ಡಬ್ಲೂ | 4 |

| | | |
|---|---|---|
| ಹೆಸರು | :- | ಮಲಕಾರಿ ಒಡೆಯರ |
| ತಂದೆ/ಗಂಡನ ಹೆಸರು | :- | ಲಕ್ಷ್ಮಣ |
| ವಯಸ್ಸು | :- | 30 ವರ್ಷ |
| ಉದ್ಯೋಗ | :- | ಪಿ.ಸಿ ನಂ.1146, ಮುಧೋಳ ಪೂಲೀಸ ಠಾಣೆ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ07.03.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ಕಳೆದ 5 ವರ್ಷಗಳಿಂದ ಮುಧೋಳ ಠಾಣೆಯಲ್ಲಿ ಪೊಲೀಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಸಾ-1 ರವರು ಅವರಿಗೆ ಬಂದ ಮಾಹಿತಿ ಪ್ರಕಾರ ಮಂಟೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿ ಚಾಸಾ-4 ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಆ ಪ್ರಕಾರ ಚಾಸಾ-4 ರವರು ಚಾಸಾ-2 ಮತ್ತು ಚಾಸಾ-3 ರವರು ಕರೆದುಕೊಂಡು ಬಂದಿದ್ದು. ಚಾಸಾ-1 ರವರು ಅವರಿಗೆ ಬಂದ ಮಾಹಿತಿ ವಿಷಯ ಪಂಚರಿಗೆ ತಿಳಿಸಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ಚಾಸಾ-1, ನಾನು ಮತ್ತು ಚಾಸಾ-4, ಪಂಚರು ಕೂಡಿಕೊಂಡು ಮಧ್ಯಾಹ್ನ 3-30 ಗಂಟೆಗೆ ಹೊರಟು ಮಂಟೂರ ಗ್ರಾಮಕ್ಕೆ 3-50 ಗಂಟೆಗೆ ತಲುಪಿದೆವು. ಅಲ್ಲಿ ಒಬ್ಬ ವ್ಯಕ್ತಿಯ ಸುತ್ತಮುತ್ತ ಸಾರ್ವಜನಿಕರು ನಿಂತಿದ್ದು, ಸಾರಾಯಿ ಪೌಚಗಳನ್ನು ನೀಡುವುದು ಮಾಡುತ್ತಿದ್ದನು. ಆತನ ಬಳಿ ರಟ್ಟಿನ ಡಬ್ಬಿ ಇತ್ತು. ಆತ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಮಾಡಿಕೊಂಡು ಸಂಜೆ 4 ಗಂಟೆ ಸುಮಾರಿಗೆ ಆತನ ಬಳಿ ಹೋದಾಗ, ಅಲ್ಲಿ ಸಾರಾಯಿ ಖರೀದಿಸುತ್ತಿರುವವರು ನಮ್ಮನ್ನು ನೋಡಿ ಓಡಿ ಹೋದರು. ಆರೋಪಿತನನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಾಜು ತಂ.ಶಿವಪ್ಪ ತಳವಾರ ಸಾ-ಮಂಟೂರ ಎಂದು ತಿಳಿಸಿದನು. ಮದ್ಯ ಮಾರಾಟ ಮಾಡಲು ಪಾಸ್/ಪರಮಿಟ್ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದನು. 4-05 ಗಂಟೆ ಆತನನ್ನು ದಸ್ತಗೀರಿ ಪಡಿಸಿಕೊಂಡರು. ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ ಬೆಂಗಳೂರು ವಿಸ್ಕಿ ಮಾದರಿಯ ತಲಾ 180 ಎಮ್.ಎಲ್ ಅಳತೆಯ 42 ಪೌಚಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 42 ಪೌಚಗಳನ್ನು

ವಶಪಡಿಸಿಕೊಂಡು ಅದೇ ರಟ್ಟಿನ ಬಾಕ್ಸನಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ಚಾಸಾ-1 ರಿಂದ ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಆರೋಪಿತನನ್ನು ಅಂಗ ಜಪ್ತಿ ಮಾಡಲಾಗಿ ರೂ.220/- ಗಳು ದೊರೆತವು. ಪಂಚನಾಮೆಯನ್ನು ಸಂಜೆ 4-05 ರಿಂದ 5-05 ರವರೆಗೆ ಪಂಚನಾಮೆಯನ್ನು ನಾನೇ ಸ್ಥಳದಲ್ಲಿ ಟೈಪ ಮಾಡಿರುತ್ತೇನೆ. ನಂತರ ಆರೋಪಿತನನ್ನು, ವಶಪಡಿಸಿಕೊಂಡ ಮುದ್ದೆ ಮಾಲು ಹಾಗೂ ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬರಲು ಅವಶ್ಯವಿದ್ದ ಸಹಾಯ ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಮುಮಾ-1 ಮತ್ತು ಮುಮಾ-2 ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸುತ್ತಾರೆ. ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**<u>ಪಾಟೀ ಸವಾಲು : ಶ್ರೀ.ವಿ.ಆರ್.ಎಸ್ ವಕೀಲರಿಂದ ಆರೋಪಿ ಪರವಾಗಿ</u>**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ಚಾಸಾ-1 ರವರಿಗೆ ಬಂದಿಲ್ಲ, ಚಾಸಾ-1 ರವರು ಪಂಚರನ್ನು ಬರಮಾಡಿಕೊಂಡಿಲ್ಲ, ನೀವು ಘಟನೆಗೆ ಸಂಬಂಧಿಸಿದಂತೆ ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿತ ಯಾವತ್ತು ಮಾರಾಟ ಮಾಡಿಲ್ಲ, ಯಾವುದೇ ಅಕ್ರಮ ಸಾರಾಯಿಯನ್ನು ಆತನಿಂದ ವಶಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚನಾಮೆಗೆ ಸ್ಥಳದಲ್ಲಿ ಚಾಸಾ-1 ಹಾಗೂ ಪಂಚರ ಸಹಿ ಪಡೆದಿಲ್ಲ, ಯಾವುದೇ ಹಣವನ್ನು ಆರೋಪಿತನಿಂದ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ನೀವು ಯಾವುದೇ ಪಂಚನಾಮೆಯನ್ನು ಬೆರಳಚ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ  ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 437/2023 |
| ಸಿ.ಡಬ್ಲೂ | 1 |
| ಪಿ.ಡಬ್ಲೂ | 5 |

| | | |
|---|---|---|
| ಹೆಸರು | :- | ಸಂಗಮನಾಂಥ ಹೊಸಮನಿ |
| ತಂದೆ/ಗಂಡನ ಹೆಸರು | :- | ಹಣಮಂತ |
| ವಯಸ್ಸು | :- | 40 ವರ್ಷ |
| ಉದ್ಯೋಗ | :- | ಪಿ ಆಯ್ ಕರ್ನಾಟಕ ಲೋಕಾಯುಕ್ತ ಬೆಳಗಾವಿ |
| ವಾಸಸ್ಥಳ | :- | ಬೆಳಗಾವಿ |

ಸಾಕ್ಷಿಯನ್ನು ದಿಃ16.08.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ದಿಃ08-05-2022 ರಿಂದ 15-06-2023 ರವರೆಗೆ ಮುಧೋಳ ಠಾಣೆಯಲ್ಲಿ ಪಿ. ಎಸ್.ಆಯ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ನನಗೆ  ಮಾಹಿತಿ ಬಂದ ಪ್ರಕಾರ ಮಂಟೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿಯನ್ನು ಮೇಲಾಧಿಕಾರಿರವರಿಗೆ ತಿಳಿಸಿ, ಚಾಸಾ-4 ಮತ್ತುಚಾಸಾ-5 ರವರಿಗೆ ಮಾಹಿತಿ ತಿಳಿಸಿ, ಚಾಸಾ-4 ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಆ ಪ್ರಕಾರ ಚಾಸಾ-4 ರವರು  ಚಾಸಾ-2 ಮತ್ತು ಚಾಸಾ-3 ರವರು ಕರೆದುಕೊಂಡು ಬಂದಿರುತ್ತಾರೆ. ನಾನು ಅವರಿಗೆ ಬಂದ ಮಾಹಿತಿ ವಿಷಯ ಪಂಚರಿಗೆ ತಿಳಿಸಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ನಾನು, ಚಾಸಾ-4 ಮತ್ತು ಚಾಸಾ-5, ಪಂಚರು ಕೂಡಿಕೊಂಡು ಮಧ್ಯಾಹ್ನ 3-30 ಗಂಟೆಗೆ ಹೊರಟು ಮಂಟೂರ ಗ್ರಾಮಕ್ಕೆ 3-50 ಗಂಟೆಗೆ ತಲುಪಿದೆವು. ಅಲ್ಲಿ ಒಬ್ಬ ವ್ಯಕ್ತಿಯ ಸುತ್ತಮುತ್ತ ಸಾರ್ವಜನಿಕರು ನಿಂತಿದ್ದು, ಸಾರಾಯಿ ಪೌಚಗಳನ್ನು ನೀಡುವುದು ಮಾಡುತ್ತಿದ್ದನು. ಆತನ ಬಳಿ ರಟ್ಟಿನ ಡಬ್ಬಿ ಇತ್ತು. ಆತ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಮಾಡಿಕೊಂಡು ಸಂಜೆ 4 ಗಂಟೆ ಸುಮಾರಿಗೆ ಆತನ ಬಳಿ ಹೋದಾಗ, ಅಲ್ಲಿ ಸಾರಾಯಿ ಖರೀದಿಸುತ್ತಿರುವವರು ನಮ್ಮನ್ನು ನೋಡಿ ಓಡಿ ಹೋದರು. ಆರೋಪಿತನನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಾಜು ತಂ.ಶಿವಪ್ಪ ತಳವಾರ ಸಾ-ಮಂಟೂರ ಎಂದು ತಿಳಿಸಿದನು. ಮದ್ಯ ಮಾರಾಟ ಮಾಡಲು ಪಾಸ್/ಪರಮಿಟ್ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದನು. 4-05

ಗಂಟೆ ಆತನನ್ನು ದಸ್ತಗೀರಿ ಪಡಿಸಿಕೊಂಡರು. ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ ಬೆಂಗಳೂರು ವಿಸ್ಕಿ ಮಾದರಿಯ ತಲಾ 180 ಎಮ್.ಎಲ್ ಅಳತೆಯ 42 ಪೌಚಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 42 ಪೌಚಗಳನ್ನು ವಶಪಡಿಸಿಕೊಂಡು ಅದೇ ರಟ್ಟಿನ ಬಾಕ್ಸನಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ನನ್ನ ಮತ್ತು ಚಾಸಾ-2 ಮತ್ತು ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಆರೋಪಿತನನ್ನು ಅಂಗ ಜಪ್ತಿ ಮಾಡಲಾಗಿ ರೂ.220/- ಗಳು ದೊರೆತವು. ಪಂಚನಾಮೆಯನ್ನು ಸಂಜೆ 4-05 ರಿಂದ 5-05 ರವರೆಗೆ ಪಂಚನಾಮೆಯನ್ನು ಚಾಸಾ-5 ರವರು ಬರೆದರು. ನಂತರ ಆರೋಪಿತನನ್ನು, ವಶಪಡಿಸಿಕೊಂಡ ಮುದ್ದೆ ಮಾಲು ಹಾಗೂ ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬಂದು ಪಂಚನಾವೆಯನ್ನು ಪ್ರಿಂಟ್ ತೆಗೆದು ದೂರನ್ನು ತಯಾರಿಸಿ, ಚಾಸಾ-8 ರವರಿಗೆ ನೀಡಿರುತ್ತೇನೆ. ನ್ಯಾಯಾಲಯದ ಅನುಮತಿ ಪಡೆಯಲು ಸಮಯಾವಕಾಶ ಇಲ್ಲ ಕಾರಣ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ಮೇಲಿನ ಕ್ರಮ ಕೈಗೊಂಡಿರುತ್ತೇನೆ. ಸಾಕ್ಷಿಗೆ ಈಗ ಮುಮಾ-1 ಮತ್ತು ಮುಮಾ-2 ತೋರಿಸುತ್ತಿದ್ದು, ಅವುಗಳನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತನನ್ನು ಗುರುತಿಸಲು ಯಾವುದೇ ಆಕ್ಷೇಪಣೆ ಇಲ್ಲ ಎಂಬ ಷರತ್ತಿಗೆ ಒಳಪಟ್ಟು ಕಲಂ.317 ರ ಅರ್ಜಿಯನ್ನು ಅಂಗೀಕರಿಸಲಾಯಿತು.

2. ಸಾಕ್ಷಿಯು ಈಗ ನಿಪಿ-1 ನ್ನು ನೋಡುತ್ತಿದ್ದು, ಅದರ ಮೇಲಿನ ತಮ್ಮ ಸಹಿಯನ್ನು ಗುರುತಿಸಿದ್ದು, ಅದರ ಮೇಲಿನ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಶೋಧನಾ ಸಮುಚ್ಚಿತ ಆಧಾರ ತೋರಿಸುತ್ತಿದ್ದು, ಅದನ್ನು ನಿಪಿ-2 ಎಂದು, ಅದರ ಮೇಲಿನ ಸಹಿಯನ್ನು ಗುರುತಿಸಿದ್ದು, ಶೋಧನಾ ಸಮುಚ್ಚಿತ ಆಧಾರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದೂರನ್ನು ತೋರಿಸುತ್ತಿದ್ದು ಅದನ್ನು ನಿಪಿ-3 ಎಂದು, ಅದರ ಮೇಲಿನ ಸಹಿಯನ್ನು ಗುರುತಿಸಿದ್ದು, ದೂರನ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು ಅದನ್ನು ನಿಪಿ-4 ಎಂದು, ಅದರ ಮೇಲಿನ ಸಹಿಯನ್ನು ಗುರುತಿಸಿದ್ದು, ಪ್ರ.ವ.ವ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ.ವಿ.ಆರ್.ಎಸ್  ವಕೀಲರಿಂದ ಆರೋಪಿ ಪರವಾಗಿ**

1. ರೂ.220/- ರ ಮುಖಬೆಲೆ ಹೇಳಬಹುದಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ನಿಮಗೆ ಬಂದಿಲ್ಲ, ಪಂಚರನ್ನು ಬರಮಾಡಿಕೊಂಡಿಲ್ಲ, ನೀವು ಘಟನೆಗೆ ಸಂಬಂಧಿಸಿದಂತೆ ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿತ ಯಾವತ್ತು ಮಾರಾಟ ಮಾಡಿಲ್ಲ, ಯಾವುದೇ ಅಕ್ರಮ ಸಾರಾಯಿಯನ್ನು ಆತನಿಂದ ವಶಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚನಾಮೆಗೆ  ನಿಮ್ಮ ಹಾಗೂ ಪಂಚರ ಸಹಿ ಪಡೆದಿಲ್ಲ, ಯಾವುದೇ ಹಣವನ್ನು ಆರೋಪಿತನಿಂದ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಸಮುಚ್ಚಿತ ಆಧಾರವನ್ನು ತಯಾರಿಸಿಲ್ಲ, ನೀವು ಅಂಕಿ ಸಂಖ್ಯೆಗಳಿಗೊಸ್ಕರ ಆರೋಪಿತನ ವಿರುದ್ದ ಸುಳ್ಳು ದಾಖಲಾತಿಯನ್ನು ತಯಾರಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ  ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 437/2023 |
| ಸಿ.ಡಬ್ಲೂ | 5 |
| ಪಿ.ಡಬ್ಲೂ | 4 |

| | | |
|---|---|---|
| ಹೆಸರು | :- | ಮಲಕಾರಿ ಒಡೆಯರ |
| ತಂದೆ/ಗಂಡನ ಹೆಸರು | :- | ಲಕ್ಷ್ಮಣ |
| ವಯಸ್ಸು | :- | 30 ವರ್ಷ |
| ಉದ್ಯೋಗ | :- | ಪಿ.ಸಿ ನಂ.1146, ಮುಧೋಳ ಪೂಲೀಸ ಠಾಣೆ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ07.03.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ಕಳೆದ 5 ವರ್ಷಗಳಿಂದ ಮುಧೋಳ ಠಾಣೆಯಲ್ಲಿ ಪೊಲೀಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.04.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಸಾ-1 ರವರು ಅವರಿಗೆ ಬಂದ ಮಾಹಿತಿ ಪ್ರಕಾರ ಮಂಟೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿ ಚಾಸಾ-4 ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಆ ಪ್ರಕಾರ ಚಾಸಾ-4 ರವರು ಚಾಸಾ-2 ಮತ್ತು ಚಾಸಾ-3 ರವರು ಕರೆದುಕೊಂಡು ಬಂದಿದ್ದು. ಚಾಸಾ-1 ರವರು ಅವರಿಗೆ ಬಂದ ಮಾಹಿತಿ ವಿಷಯ ಪಂಚರಿಗೆ ತಿಳಿಸಿ, ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ಚಾಸಾ-1, ನಾನು ಮತ್ತು ಚಾಸಾ-4, ಪಂಚರು ಕೂಡಿಕೊಂಡು ಮಧ್ಯಾಹ್ನ 3-30 ಗಂಟೆಗೆ ಹೊರಟು ಮಂಟೂರ ಗ್ರಾಮಕ್ಕೆ 3-50 ಗಂಟೆಗೆ ತಲುಪಿದೆವು. ಅಲ್ಲಿ ಒಬ್ಬ ವ್ಯಕ್ತಿಯ ಸುತ್ತಮುತ್ತ ಸಾರ್ವಜನಿಕರು ನಿಂತಿದ್ದು, ಸಾರಾಯಿ ಪೌಚಗಳನ್ನು ನೀಡುವುದು ಮಾಡುತ್ತಿದ್ದನು. ಆತನ ಬಳಿ ರಟ್ಟಿನ ಡಬ್ಬಿ ಇತ್ತು. ಆತ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತಮಾಡಿಕೊಂಡು ಸಂಜೆ 4 ಗಂಟೆ ಸುಮಾರಿಗೆ ಆತನ ಬಳಿ ಹೋದಾಗ, ಅಲ್ಲಿ ಸಾರಾಯಿ ಖರೀದಿಸುತ್ತಿರುವವರು ನಮ್ಮನ್ನು ನೋಡಿ ಓಡಿ ಹೋದರು. ಆರೋಪಿತನನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಾಜು ತಂ.ಶಿವಪ್ಪ ತಳವಾರ ಸಾ-ಮಂಟೂರ ಎಂದು ತಿಳಿಸಿದನು. ಮದ್ಯ ಮಾರಾಟ ಮಾಡಲು ಪಾಸ್/ಪರಮಿಟ್ ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿದನು. 4-05 ಗಂಟೆ ಆತನನ್ನು ದಸ್ತಗೀರಿ ಪಡಿಸಿಕೊಂಡರು. ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ ಬೆಂಗಳೂರು ವಿಸ್ಕಿ ಮಾದರಿಯ ತಲಾ 180 ಎಮ್.ಎಲ್ ಅಳತೆಯ 42 ಪೌಚಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 42 ಪೌಚಗಳನ್ನು

ವಶಪಡಿಸಿಕೊಂಡು ಅದೇ ರಟ್ಟಿನ ಬಾಕ್ಸನಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ಚಾಸಾ-1 ರಿಂದ ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಆರೋಪಿತನನ್ನು ಅಂಗ ಜಪ್ತಿ ಮಾಡಲಾಗಿ ರೂ.220/- ಗಳು ದೊರೆತವು. ಪಂಚನಾಮೆಯನ್ನು ಸಂಜೆ 4-05 ರಿಂದ 5-05 ರವರೆಗೆ ಪಂಚನಾಮೆಯನ್ನು ನಾನೇ ಸ್ದಳದಲ್ಲಿ ಟೈಪ ಮಾಡಿರುತ್ತೇನೆ. ನಂತರ ಆರೋಪಿತನನ್ನು, ವಶಪಡಿಸಿಕೊಂಡ ಮುದ್ದೆ ಮಾಲು ಹಾಗೂ ಪಂಚನಾಮೆಯನ್ನು ಠಾಣೆಗೆ ತೆಗೆದುಕೊಂಡು ಬರಲು ಅವಶ್ಯವಿದ್ದ ಸಹಾಯ ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಮುಮಾ-1 ಮತ್ತು ಮುಮಾ-2 ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸುತ್ತಾರೆ. ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಶ್ರೀ.ವಿ.ಆರ್.ಎಸ್ ವಕೀಲರಿಂದ ಆರೋಪಿ ಪರವಾಗಿ</u>

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಮಾಹಿತಿ ಚಾಸಾ-1 ರವರಿಗೆ ಬಂದಿಲ್ಲ, ಚಾಸಾ-1 ರವರು ಪಂಚರನ್ನು ಬರಮಾಡಿಕೊಂಡಿಲ್ಲ, ನೀವು ಘಟನೆಗೆ ಸಂಬಂಧಿಸಿದಂತೆ ಘಟನಾ ಸ್ದಳಕ್ಕೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿತ ಯಾವತ್ತು ಮಾರಾಟ ಮಾಡಿಲ್ಲ, ಯಾವುದೇ ಅಕ್ರಮ ಸಾರಾಯಿಯನ್ನು ಆತನಿಂದ ವಶಪಡಿಸಿಕೊಂಡಿಲ್ಲ, ಸ್ದಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚನಾಮೆಗೆ ಸ್ದಳದಲ್ಲಿ ಚಾಸಾ-1 ಹಾಗೂ ಪಂಚರ ಸಹಿ ಪಡೆದಿಲ್ಲ, ಯಾವುದೇ ಹಣವನ್ನು ಆರೋಪಿತನಿಂದ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ದಳದಲ್ಲಿ ನೀವು ಯಾವುದೇ ಪಂಚನಾಮೆಯನ್ನು ಬೆರಳಚ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಮೇಲಾಧಿಕಾರಿ ಆದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ